**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ದಿನಾಂಕ 14 ನೇ ಜುಲೈ 2026**

**ಸಿ.ಸಿ. ನಂ 1658/2025**

ಫಿರ್ಯಾದಿಃ ಕರ್ನಾಟಕ ರಾಜ್ಯ (ಕುಶಾಲನಗರ ಗ್ರಾಮಾಂತರ ಪೋಲೀಸರಿಂದ)

ವಿರುದ್ಧ

ಆರೋಪಿಃ1. ಸುನಿಲ್

2. ರಾಜು ಆರ್
3. ಶರತ್ ಆರ್
4. ದಿನೇಶ್ ರಾವತ್
5. ಜಿತೇಂದ್ರ ಕುಮಾರ್ ರಾಮ್

## ದೋಷಾರೋಪಣೆ

ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಶಾಲನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ

ದಿನಾಂಕ 11.09.2025 ರಂದು ಕುಶಅಲನಗರ ಗ್ರಾಮಾಂತರ ಠಾಣಾ ಸರಹದ್ದಿಗೆ ಸೇರಿದ ಕೂಡ್ಲೂರು ಗ್ರಾಮದ ಶ್ರೀ ಉಮಾ ಕಾಫಿ ವರ್ಕ್ಸ್ ನಲ್ಲಿ ಸೂಪರ್ ವೈಸ್ ಆಗಿ ಕೆಲಸ ಮಾಡಿಕೊಂಡಿದ್ದ 1ನೇ ಅರೋಪಿಯಾದ ನೀವು ಇತರೆ ಆರೋಪಿಗಳ ಜೊತೆ ಸೇರಿಕೊಂಡು ಸಮಾನ ಉದ್ದೇಶದಿಂದ ಉಮಾ ಕಾಫಿ ವರ್ಕ್ಸ್ ನಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದ 4ನೇ ಆರೋಪಿಯಾದ ನೀವು ಮತ್ತು ಲೋಡರ್ಸ್ ಕೆಲಸ ಮಾಡುತ್ತಿದ್ದ 5ನೇ ಆರೋಪಿಯಾದ ನೀವು ನಿಮ್ಮಗಳ ಸಹಾಯದಿಂದ ಇದೇ ವರ್ಷ ಜನವರಿ ತಿಂಗಳಿನಿಂದ ಉಮಾ ಕಾಫಿ ಗೋಡಾನ್ ನಿಂದ ಯಾರಿಗೂ ಅನುಮಾನ ಬಾರದಂತೆ ದಿನಾಂಕ 14.08.2025, ದಿನಾಂಕ 15.08.2025, ದಿನಾಂಕ 17.08.2025, ದಿನಾಂಕ 21.08.2025 ರಂದು ಹಾಗೂ ಬೇರೆ ಬೇರೆ ದಿನಗಳಂದು ಒಟ್ಟು 115 ಕಾಫಿ ಬೇಳೆ ತುಂಬಿದ ಮೂಟೆಗಳನ್ನು ಕಳ್ಳತನ ಮಾಡಿರುವ ಕಾರಣ ಆರೋಪಿಗಳಾದ ನೀವುಗಳು ಭಾ.ನ್ಯಾ.ಸಂ.ಕಲಂ 306 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಎರಡನೇಯದಾಗಿ ಅದೇ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಮೇಲಿನ ಕೃತ್ಯವನ್ನು ಮುಂದುವರಿಸುತ್ತಾ 2 ಮತ್ತು 3ನೇ ಆರೋಪಿಗಳಾದ ನೀವುಗಳು ಕಳ್ಳತನ ಮಾಡಿದ ಕಾಫಿ ಬೇಳೆ ತುಂಬಿದ ಮೂಟೆಗಳನ್ನು ಕಂಪೆನಿ ಕಾರಿನಲ್ಲಿ ಹಾಗೂ 3ನೇ ಆರೋಪಿಯಾದ ನಿಮ್ಮ ಆಟೋ ರಿಕ್ಷಾದಲ್ಲಿ ಸಾಗಾಟ ಮಾಡಿ ಕುಶಾಲನಗರ ನಗರ ಬಿ.ಎಂ ರಸ್ತೆಯಲ್ಲಿರುವ ಚಾಸಾ 12 ರವರಿಗೆ ಸೇರಿದ ಎಸ್ಟೇಟ್ಸ್ ಪ್ರೆಶ್ ಕಾಫಿ ಟ್ರೇಡರ್ಸ್ ಗೆ ಮಾರಾಟ ಮಾಡಿರುವುವ ಕಾರಣ ಆರೋಪಿಗಳಾದ ನೀವುಗಳು ಭಾ.ನ್ಯಾ.ಸಂ.ಕಲಂ 305(ಎ) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

Sharath.R

## ಅಪಾದನೆ

ಪ್ರಶ್ನೆ: 1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆ ಯನ್ನು ಅರ್ಥಮಾಡಿಕೊಂಡಿರಾ?

ಉ:1 ಅರ್ಥವಾಯಿತು

ಉ:2 ''

ಉ:3 ''

W.4 ''

W.5 ''

ಪ್ರಶ್ನೆ:2: ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ:1 ಸುಳ್ಳು, ವಿಚಾರಣೆ ನಡೆಯಲಿ

ಉ:2 ''

ಉ:3 ''

W.4 ''

W.5 ''

( ಈ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಲಾಗಿದ್ದು, ಆತ ಕೊಟ್ಟ ಉತ್ತರಗಳನ್ನು ನನ್ನ ಕೈ ಬರಹದಲ್ಲಿ ಬರೆದುಕೊಂಡಿದ್ದೇನೆ ಹಾಗೂ ಮೇಲ್ಕಂಡ ಹೇಳಿಕೆ ನಿಜವಾದ ಹೇಳಿಕೆ ಆಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದ್ದೇನೆ)

Sharath.R

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕುಶಾಲನಗರ